**<u>ಸಾಕ್ಷಿಗೆ ದಿನಾಂಕಃ 17.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.MN ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ **2** ನೇ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು** ನಿ.ಪಿ.**2** ಎಂದು, **Medico Legal case** ನಕಲನ್ನು ನಿ.ಪಿ.**3** ಎಂದು, ಮತ್ತು ಮರು ಹೇಳಿಕೆಯನ್ನು ನಿ.ಪಿ.**4** ಎಂದು, **ಸ್ಥಳ ಪಂಚನಾಮೆಯನ್ನು** ನಿ.ಪಿ.**5** ಎಂದು, **ಕಚ್ಚಾ ನಕ್ಷೆಯನ್ನು** ನಿ.ಪಿ.**6** ಎಂದು, ಐಎಂವಿ ವರದಿಯನ್ನು ನಿ.ಪಿ.**7** ಎಂದು, ಶವ ಪರೀಕ್ಷಾ ವರದಿಯನ್ನು ನಿ.ಪಿ.**8** ಎಂದು, ಶವ ತನಿಖಾ ವರದಿಯನ್ನು ನಿ.ಪಿ.**9** ಎಂದು, ಶವ ತನಿಖಾ ಕಾಲದಲ್ಲಿ ತೆಗೆದಿರುವ ಫೋಟೋಲನ್ನು ನಿ.ಪಿ.**10** ಎಂದು, ಮತ್ತೊಂದು ಪಂಚನಾಮೆಯನ್ನು ನಿ.ಪಿ.**11** ಎಂದು ಗುರುತಿಸಿದೆ.

3) ಮರಣೋತ್ತರ ಪರೀಕ್ಷೆ ಮಾಡಿ ವರದಿ ನೀಡಬೇಕು ಎಂದು ನೀಡಿರುವ ಮನವಿ ಪತ್ರವನ್ನು ನಿ.ಪಿ.**12** ಎಂದು ಗುರುತಿಸಿದೆ.

4) ಹೂತು ಹಾಕಿರುವ ಶವವನ್ನು ಹೊರಗೆ ತೆಗೆದು ಶವ ತನಿಖೆಯನ್ನು ಮಾಡಬೇಕು ಎಂಬುದಾಗಿ ನೀಡಿರುವಂತಹ ಮನವಿ ಪತ್ರವನ್ನು ನಿ.ಪಿ.**13** ಎಂದು ಗುರುತಿಸಿದೆ. ಮೊಕದ್ದಮೆ ಸಂಖ್ಯೆ **24/2024** ರಲ್ಲಿ ಐಪಿಸಿ ಕಲಂ **304(ಎ)** ಅನ್ನು ಸೇರಿಸಬೇಕು ಎಂಬುದಾಗಿ ನೀಡಿರುವಂತಹ ಮನವಿ ಪತ್ರವನ್ನು ಮತ್ತು ಉಪವಿಭಾಗ ಅಧಿಕಾರಿಗಳಿಗೆ ನೀಡಿರುವಂತಹ ಮತ್ತೊಂದು ಮನವಿ ಪತ್ರವನ್ನು ಕ್ರಮವಾಗಿ ನಿ.ಪಿ.**14** ಮತ್ತು **15** ಎಂದು ಗುರುತಿಸಿದೆ.

5) ಅಂತಿಮ ವರದಿಯನ್ನು ನಿ.ಪಿ.**16** ಎಂದು ಗುರುತಿಸಿದೆ.
**ಸೂಚನೆ:** ನಿ.ಪಿ.1 ರಿಂದ ನಿ.ಪಿ.16 ಎಂದು ಗುರುತು ಆಗಿರುವ ದಾಖಲೆಗಳು ಮತ್ತೊಂದು ಪ್ರಕರಣದಿಂದ ಪಡೆದುಕೊಂಡಿರುವಂತಹ ಧೃಡೀಕೃತ ನಕಲುಗಳು ಆಗಿವೆ.

6) ಈ ಸಾಕ್ಷಿದಾರರ ಮತ್ತು ಮತ್ತೊಬ್ಬ ಅರ್ಜಿದಾರರ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಅಪಘಾತದಲ್ಲಿ ಮರಣ ಹೊಂದಿದ ಅರ್ಚಿತ್ ಎಂಬ ಮಗುವಿನ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಈ ಸಾಕ್ಷಿದಾರರು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ

ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**17** ರಿಂದ ನಿ.ಪಿ.**19** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

7) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ.ಪಿ.**20** ಎಂದು ಗುರುತಿಸಿದೆ.
**ಸೂಚನೆಃ** ನಿ.ಪಿ.**20** ಎಂದು ಗುರುತು ಆಗಿರುವ ದಾಖಲೆಯು ಒಟ್ಟು **3** ಹಾಳೆಗಳನ್ನು ಒಳಗೊಂಡಿದೆ.

8) ಒಂದು ಮೆಡಿಕಲ್ ಬಿಲ್ ಅನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**21** ಎಂದು ಗುರುತಿಸಿದೆ.

9) ಆದ ಕಾರಣದಿಂದ ಪ್ರಾರ್ಥನೆಯಂತೆ ನಮಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.